# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 617 |
| 2 | ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಮಹಾನಗರದಲ್ಲಿ ಪ್ರತಿದಿನ ಉತ್ಪತ್ತಿಯಾಗುವ ಘನತ್ಯಾಜ್ಯದ ಪ್ರಮಾಣ ಎಷ್ಟು; ಅದರಲ್ಲಿ ಎಷ್ಟು ಪ್ರಮಾಣವನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ, ವಿಂಗಡಿಸಿ ಹಾಗೂ ವಿಲೇವಾರಿ ಮಾಡಲಾಗುತ್ತಿದೆ; (ಮಾಹಿತಿ ನೀಡುವುದು)</td><td>
ಗ್ರೇಟರ್ ಬೆಂಗಳೂರು ಪ್ರದೇಶದ ಕೇಂದ್ರ, ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರ ನಗರ ಪಾಲಿಕೆಗಳಲ್ಲಿ ಪ್ರತಿನಿತ್ಯ 5800 ಮೆ.ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿರುತ್ತದೆ ಎಂದು ಅಂದಾಜಿಸಲಾಗಿರುತ್ತದೆ.
ಪಾಲಿಕೆಯ ವ್ಯಾಪ್ತಿಯಲ್ಲಿ ವಿಂಗಡಿತ ರೂಪದಲ್ಲಿ ಸಂಗ್ರಹವಾಗುತ್ತಿರುವ ತ್ಯಾಜ್ಯವನ್ನು ಈ ಕೆಳಕಂಡಂತೆ ಘನತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ಸಂಸ್ಕರಣೆ/ವಿಲೇವಾರಿ ಮಾಡಲಾಗುತ್ತಿರುತ್ತದೆ.
<table>
<tr><th>ಕ್ರ.ಸಂ.</th><th>ತ್ಯಾಜ್ಯದ ವಿಧ</th><th>ವಿಲೇವಾರಿ ಆಗುತ್ತಿರುವ ಅಂದಾಜು ಪ್ರಮಾಣ (ಮೆ.ಟನ್/ದಿನ)</th><th>ವಿಲೇವಾರಿ</th></tr>
<tr><td>1.</td><td>ಹಸಿ ತ್ಯಾಜ್ಯ ಪ್ರಮಾಣ</td><td>3074</td><td>8 ಕೇಂದ್ರೀಕೃತ ಸಂಸ್ಕರಣಾ ಘಟಕಗಳು<br>13 ಬಯೋಮಥನ್ಯಜೇಷನ್ ಘಟಕಗಳು</td></tr>
<tr><td>2.</td><td>ಒಣ ತ್ಯಾಜ್ಯ ಪ್ರಮಾಣ</td><td>1929</td><td>125 ಒಣತ್ಯಾಜ್ಯ ಸಂಗ್ರಹಣಾ ಘಟಕಗಳು</td></tr>
<tr><td>3.</td><td>ಪ್ರಾಣಿ ತ್ಯಾಜ್ಯ ಪ್ರಮಾಣ</td><td>104</td><td>ಪ್ರಾಣಿ ತ್ಯಾಜ್ಯ ಸಂಸ್ಕರಣಾ ಘಟಕಗಳು</td></tr>
<tr><td>4.</td><td>ಗೃಹ ನೈರ್ಮಲ್ಯ ತ್ಯಾಜ್ಯ</td><td>59</td><td>ನೈರ್ಮಲ್ಯ ತ್ಯಾಜ್ಯ ಸಂಸ್ಕರಣಾ ಘಟಕಗಳು</td></tr>
<tr><td>5.</td><td>ಗೃಹ ಹಾನಿಕಾರಕ ತ್ಯಾಜ್ಯ</td><td>59</td><td>ನೈರ್ಮಲ್ಯ ತ್ಯಾಜ್ಯ ಸಂಸ್ಕರಣಾ ಘಟಕಗಳು</td></tr>
<tr><td>6.</td><td>ನಿಷ್ಕ್ರಿಯ ತ್ಯಾಜ್ಯ ಪ್ರಮಾಣ</td><td>575</td><td>ಭೂ ಭರ್ತಿ ಪ್ರದೇಶ</td></tr>
<tr><td></td><td>ಒಟ್ಟು</td><td>5800</td><td></td></tr>
</table>
</td></tr>
</table>

| | | |
|---|---|---|
| ಆ) | ನಗರದ ಹಲವು ಪ್ರದೇಶಗಳಲ್ಲಿ ರಸ್ತೆ ಬದಿ, ಖಾಲಿ ಜಾಗ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ಸಂಗ್ರಹವಾಗುತ್ತಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಸರ್ಕಾರದ ಕೈಗೊಂಡಿರುವ ಕ್ರಮಗಳೇನು; | ಆಗಸ್ಟ್ 2026 ರ ಮಾಹೆಯಲ್ಲಿ ತ್ಯಾಜ್ಯದಿಂದ ಸ್ವಾತಂತ್ರ್ಯ (Just Clean Bengaluru) ಅಭಿಯಾನವನ್ನು ಹಮ್ಮಿಕೊಂಡಿದ್ದು, ನಗರದೆಲ್ಲೆಡೆ ಸಂಗ್ರಹವಾಗಿರುವ Constriction & Demolition ತ್ಯಾಜ್ಯವನ್ನು ಸಮರೋಪಾದಿಯಲ್ಲಿ ತೆಗೆಯಲಾಗುತ್ತಿದೆ.<br>ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪ್ರತಿ ಮನೆಯಿಂದ ಘನತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ:<br>• ಸಮರ್ಪಕ ಪ್ರಾಥಮಿಕ ಕಸ ಸಂಗ್ರಹಣೆ ಹಾಗೂ ಸಾಗಾಣಿಕೆಗಾಗಿ ಜಿಪಿಎಸ್ ಹೊಂದಿರುವ ವಿವಿಧ ಸಾಮರ್ಥ್ಯದ ಆಟೋ ಟಿಪ್ಪರ್ ಹಾಗೂ ಕಾಂಪ್ಯಾಕ್ಟರ್‌ಗಳನ್ನು ಪಡೆಯಲು 33 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯಲಾಗಿದ್ದು, ಈ ಪೈಕಿ 21 ಪ್ಯಾಕೇಜ್‌ಗಳು ಅಂತಿಮ ಹಂತದಲ್ಲಿವೆ.<br>• ಸಮಗ್ರ ಘನತ್ಯಾಜ್ಯ ನಿರ್ವಹಣೆ ಯೋಜನೆಯಡಿ ಮುಂದಿನ 30 ವರ್ಷಗಳ ಅವಧಿಗೆ ಬೆಂಗಳೂರಿನ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ತಲಾ 100 ಎಕರೆ ಪ್ರದೇಶದಲ್ಲಿ ಎಲ್ಲಾ ಬಗೆಯ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡುವ ಯೋಜನೆಯ ಟೆಂಡರ್ ಕರೆಯಲಾಗಿದ್ದು, ಪ್ರಗತಿಯಲ್ಲಿರುತ್ತದೆ. |
| ಇ) | ಮನೆಮನೆಗೆ ಕಸ ಸಂಗ್ರಹಣೆ, ಕಸ ವಿಂಗಡಣೆ ಮತ್ತು ಸಾಗಾಣಿಕೆಯಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವ ಗುತ್ತಿಗೆದಾರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಇದುವರೆಗೆ ಕೈಗೊಂಡಿರುವ ಕ್ರಮಗಳೇನು; | ಮನೆ-ಮನೆ ಕಸ ಸಂಗ್ರಹಣೆ, ಕಸ ವಿಲೇವಾರಿ ಮತ್ತು ಸಾಗಾಣಿಕೆಯಲ್ಲಿ ನಿರ್ಲಕ್ಷ ತೋರಿಸಿದ್ದಲ್ಲಿ ಸಂಬಂಧ ಪಟ್ಟ ಗುತ್ತಿಗೆದಾರರುಗಳಿಗೆ SOP ರೀತ್ಯ ದಂಡ ವಿಧಿಸಲಾಗಿರುತ್ತದೆ. ನಿರ್ಲಕ್ಷತೆಯನ್ನು ಮುಂದುವರೆಸುವ ಗುತ್ತಿಗೆದಾರರಿಗೆ ನೋಟೀಸ್ ನೀಡಿ ಸರಬರಾಜು ಆದೇಶವನ್ನು ರದ್ದುಪಡಿಸಿ ಪರ್ಯಾಯ ಗುತ್ತಿಗೆದಾರರನ್ನು ನಿಯೋಜಿಸಲಾಗುತ್ತಿದೆ. |
| ಈ) | ಬೆಂಗಳೂರು ನಗರದಲ್ಲಿ ಕಸದಿಂದ ಉಂಟಾಗುತ್ತಿರುವ ದುರ್ವಾಸನೆ, ಸೊಳ್ಳೆ-ನೊಣಗಳ ಹೆಚ್ಚಳ ಹಾಗೂ ಸಾರ್ವಜನಿಕ ಆರೋಗ್ಯದ ಮೇಲೆ ಬೀರುತ್ತಿರುವ ಪರಿಣಾಮವನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ, (ಮಾಹಿತಿ ನೀಡುವುದು) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಸದಿಂದ ಉಂಟಾಗುತ್ತಿರುವ ದುರ್ವಾಸನೆ, ಸೊಳ್ಳೆ-ನೊಣಗಳ ಹೆಚ್ಚಳ ಹಾಗೂ ಸಾರ್ವಜನಿಕ ಆರೋಗ್ಯದ ಮೇಲೆ ಬೀರುತ್ತಿರುವ ಪರಿಣಾಮವನ್ನು ನಿಯಂತ್ರಿಸಲು, ಬ್ಲಾಕ್ ಸ್ಪಾಟ್‌ಗಳು ಸೃಷ್ಟಿಯಾಗದಂತೆ ಪ್ರತಿದಿನ ಮನೆ-ಮನೆ ತ್ಯಾಜ್ಯ ಸಂಗ್ರಹಣೆ ಬಲಪಡಿಸಲು ಲಿಂಕ್ ವರ್ಕರ್ಸ್‌ಗಳು ಮನೆ-ಮನೆ ಭೇಟಿ ನೀಡಿ ವ್ಯವಸ್ಥೆಗೆ ಲಿಂಕ್ ಮಾಡುವ ಕಾರ್ಯವನ್ನು ಮಾಡುತ್ತಿರುತ್ತಾರೆ. |

.3...

| | | |
|---|---|---|
| | | ತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಎಸೆಯುವವರಿಗೆ ವಾರ್ಡ್ ಮಾರ್ಷಲ್ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ದಂಡವನ್ನು ವಿಧಿಸುತ್ತಿರುತ್ತಾರೆ. ಹಲವು ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಿ ಹಗಲು-ರಾತ್ರಿ ಪಾಳಿಗಳಲ್ಲಿ ನಿಗಾವಹಿಸಿ ನಿರ್ಮೂಲನೆ ಮಾಡಲಾಗುತ್ತಿದ್ದು, ಉಳಿದಂತೆ ಬಾಕಿ ಇರುವ ಬ್ಲಾಕ್ ಸ್ಪಾಟ್ ಗಳನ್ನು ಪ್ರತಿದಿನವೂ ತೆರವುಗೊಳಿಸಲಾಗುತ್ತಿದೆ. ಅವಶ್ಯವಿರುವಲ್ಲಿ ಬ್ಲೀಚಿಂಗ್ ಪೌಡರ್ ಹಾಕಿಸಲಾಗುತ್ತಿದೆ. |
| ಉ) | ಮುಂದಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಕಸ ಸಂಗ್ರಹಣೆ ಮತ್ತು ವೈಜ್ಞಾನಿಕ ವಿಲೇವಾರಿಗಾಗಿ ಸರ್ಕಾರ ರೂಪಿಸಿರುವ ದೀರ್ಘಕಾಲೀನ ಯೋಜನೆ ಹಾಗೂ ಅದಕ್ಕಾಗಿ ಮೀಸಲಿಟ್ಟಿರುವ ಅನುದಾನ ಎಷ್ಟು? (ಮಾಹಿತಿ ನೀಡುವುದು) | • ಮುಂದಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಕಸ ಸಂಗ್ರಹಣೆ ಮತ್ತು ವೈಜ್ಞಾನಿಕ ವಿಲೇವಾರಿಗಾಗಿ ಸರ್ಕಾರವು ಘನ ತ್ಯಾಜ್ಯದ ಪ್ರಾಥಮಿಕ ಹಂತದ ಸಂಗ್ರಹಣೆ ಹಾಗೂ ಸಾಗಾಣಿಕೆಗೆ 33 ಪ್ಯಾಕೇಜ್‌ಗಳಲ್ಲಿ ಹೊಸ ಮಾದರಿಯ ನೂತನ ವಾಹನಗಳೊಂದಿಗೆ ವಿಂಗಡಿಸಿದ ತ್ಯಾಜ್ಯವನ್ನು ಸಂಗ್ರಹಿಸಲು 7 ವರ್ಷಗಳ ಅವಧಿಗೆ ಟೆಂಡರ್ ಆಹ್ವಾನಿಸಿದ್ದು, ಈ ಪೈಕಿ 21 ಪ್ಯಾಕೇಜ್‌ಗಳು ಅಂತಿಮ ಹಂತದಲ್ಲಿರುತ್ತವೆ.<br>• ಸಂಗ್ರಹಿಸಿದ ವಿವಿಧ ಬಗೆಯ ತ್ಯಾಜ್ಯಗಳ ವ್ಯವಸ್ಥಿತ ಸಾಗಾಣಿಕೆ, ಸಂಸ್ಕರಣೆ ಹಾಗೂ ವಿಲೇವಾರಿಗೆ ಸಮಗ್ರ ಘನತ್ಯಾಜ್ಯ ನಿರ್ವಹಣೆ 2 ಪ್ಯಾಕೇಜ್‌ಗಳಲ್ಲಿ 30 ವರ್ಷದ ಅವಧಿಗೆ ಟೆಂಡರನ್ನು ಆಹ್ವಾನಿಸಿದ್ದು, ಪ್ರಗತಿಯಲ್ಲಿರುತ್ತದೆ.<br>• ನಗರ ವ್ಯಾಪ್ತಿಯಲ್ಲಿ ವೈಜ್ಞಾನಿಕ ದ್ವಿತೀಯ ಹಂತದ ಸಾಗಾಣಿಕೆಗೆ ಟ್ರಾನ್ಸ್‌ಫರ್ ಸ್ಟೇಷನ್ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.<br>• ಈ ಸಂಬಂಧ ಅಗತ್ಯವಾದ ಅನುದಾನವನ್ನು ಐದು ನಗರ ಪಾಲಿಕೆಗಳ ಆಯಾ ಆರ್ಥಿಕ ವರ್ಷಗಳ ಆಯವ್ಯಯಗಳಲ್ಲಿ ಅನುವು ಮಾಡಿಕೊಳ್ಳಲಾಗುವುದು. |

**ನಅಇ 602 ಎಂಎನ್‌ವೈ 2026 (ಇ)**

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು